1	2	3	4	5
60.	ರಾಜಕುಂಜ ಸ್ಥಳ ಕುಮ್ಮಿ (ಬಿಟ್ಟು ಉಳಿಕೆ ಸ್ಥಳ)	233 ಬಿ ಪೈಕಿ	239.96	
61.	ಕ್ಯೊಲಾ	269	9.49	
62.	''	191 : 1	18.53	
	ಒಟ್ಟು ವಿಸ್ತೀರ್ಣ		1,132.36	

ನಂದಿನಿ ಬಡಾವಣೆಯ ಲೋಕೋಪಯೋಗಿ ವಸತಿ ಗೃಹಗಳಿಗೆ ಸುಣ್ಣಬಣ್ಣ ಬಳಿಯುವುದು

539 (1120) ಶ್ರೀ ಎಸ್. ಅಂಗಾರ (ಸುಳ್ಯ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನಂದಿನಿ ಬಡಾವಣೆಯ ಲೋಕೋಪಯೋಗಿ ವಸತಿಗೃಹಗಳಿಗೆ ಕಳೆದ ಮೂರುವರ್ಷಗಳಿಂದ ಸುಣ್ಣ ಬಣ್ಣ ತುಂಬದೇಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ, ಸುಣ್ಣ ಬಣ್ಣ ತುಂಬಲು ತಕ್ಷಣ ಕ್ರಮ ಕೈಗೊಳ್ಳಲಾಗುವುದೆ ?

ಆ) ಸದರಿ ವಸತಿಗೃಹಗಳ ನೌಕರರುಗಳ ವಾಹನಗಳನ್ನು ನೆಲ ಅಂತಸ್ತಿನಲ್ಲಿ ನಿಲ್ಲಿಸುತ್ತಿದ್ದು ರಾತ್ರಿ ವೇಳೆಯಲ್ಲಿ ಇವುಗಳ ಸುರಕ್ಷತೆಯ ದೃಷ್ಟಿಯಲ್ಲಿ ಇ.ಎಸ್.ಐ ವಸತಿಗೃಹಗಳಲ್ಲಿ ಮಾಡಿರುವಂತೆ ಗ್ರಿಲ್‌ಗಳನ್ನು ಹಾಕಿಸಲು ಕ್ರಮ ಕೈಗೊಳ್ಳಲಾಗುವುದೇ ; ಹಾಗಿದ್ದಲ್ಲಿ ಯಾವಾಗ ?

ಶ್ರೀ ಉಮೇಶ್ .ವಿ. ಕತ್ತಿ (ಲೋಕೋಪಯೋಗಿ ಸಚಿವರು) :

ಅ) 1996-97ನೇ ಸಾಲಿನಲ್ಲಿ ಎಂ.ಐ.ಜಿ. ವಸತಿಗೃಹಗಳ ಹೊರಭಾಗದ ಗೋಡೆಗಳಿಗೆ ಸುಣ್ಣ ಬಣ್ಣಹಚ್ಚುವ ಕಾಮಗಾರಿಯನ್ನು ಮಾಡಲಾಗಿದೆ. ಪ್ರಸ್ತುತ ಸಾಲಿನಲ್ಲಿಎಂ.ಐ.ಜಿ. ವಸತಿಗೃಹಗಳ ಒಳಭಾಗದಲ್ಲಿ ಹಾಗೂ ಎಲ್.ಐ.ಜಿ. ವಸತಿಗೃಹಗಳ ಹೊರ ಭಾಗಗಳಿಗೆ ಸುಣ್ಣಬಣ್ಣ ಹಚ್ಚುವ ಕೆಲಸವನ್ನು ಕೈಗೆತ್ತಿಕೊಳ್ಳ ಲಾಗಿದೆ.

ಆ) ವಾಹನಗಳ ಸುರಕ್ಷತೆಗೆ ಸಂಬಂಧಪಟ್ಟಂತೆ ಇದುವರೆವಿಗೂ ಯಾವುದೇ ನಿವಾಸಿಗಳಿಂದ ಯಾವ ಬೇಡಿಕೆ ದೂರುಗಳು ಬಂದಿರುವುದಿಲ್ಲ.

ಬಳ್ಳಾರಿ ಜಿಲ್ಲೆಯಲ್ಲಿ 1998-99ರಲ್ಲಿ ರಸ್ತೆ ದುರಸ್ತಿಗಾಗಿ ಖರ್ಚು ಮಾಡಿದ ಹಣ

540 (293) ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಳ್ಳಾರಿ ಜಿಲ್ಲೆಯಲ್ಲಿ 1998-99ರಲ್ಲಿ ರಸ್ತೆ ದುರಸ್ತಿಗಾಗಿ ಇಲ್ಲಿಯವರೆಗೆ ಬಿಡುಗಡೆ ಮಾಡಿದ ಹಣವೆಷ್ಟು; (ತಾಲ್ಲೂಕುವಾರು ವಿವರ (ನೀಡುವುದು)

(ಆ) ಯಾವ ಯಾವ ರಸ್ತೆಗಳನ್ನು ಈಹಣದಲ್ಲಿ ದುರಸ್ತಿ ಮಾಡಲಾಗಿದೆ ?

ಶ್ರೀ ಉಮೇಶ್. ವಿ. ಕತ್ತಿ (ಲೋಕೋಪಯೋಗಿ ಸಚಿವರು)

ಅ) ಬಳ್ಳಾರಿ ಜಿಲ್ಲೆಯಲ್ಲಿ 1998-99ರಲ್ಲಿ ರಸ್ತೆ ದುರಸ್ತಿಗಾಗಿ ಒಟ್ಟು 452.88 ಲಕ್ಷ ರೂ. ಗಳನ್ನು ಖರ್ಚು ಮಾಡಲಾಗಿದೆ. ತಾಲ್ಲೂಕುವಾರು ವಿವರಗಳು ಕೆಳಕಂಡಂತಿವೆ :-

(ಲಕ್ಷ ರೂ. ಗಳಲ್ಲಿ)

1) ಬಳ್ಳಾರಿ ತಾಲ್ಲೂಕು	-	64.16
2) ಶಿರಗುಪ್ಪ ತಾಲ್ಲೂಕು	-	21.63
3) ಹೊಸಪೇಟೆ ತಾಲ್ಲೂಕು	-	67.57
4) ಸಂಡೂರು ತಾಲ್ಲೂಕು	-	45.41
5) ಕೊಡ್ಲಿಗಿ ತಾಲ್ಲೂಕು	-	33.20
6) ಹಡಗಲಿ ತಾಲ್ಲೂಕು	-	77.04
7) ಹಗರಿಬೊಮ್ಮನಹಳ್ಳಿ	-	43.87
ಒಟ್ಟು		452.88 ಲಕ್ಷ ರೂ. ಗಳು

ಆ) ಮೇಲೆ ತಿಳಿಸಿದ ಹಣದಲ್ಲಿ ಬಳ್ಳಾರಿ ಜಿಲ್ಲೆಯ ರಸ್ತೆಗಳನ್ನು ದುರಸ್ತಿ ಮಾಡಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅ ನು ಬ ಂ ಧ

(1) ರಾಜ್ಯ ಹೆದ್ದಾರಿಗಳು :

1) ಶ್ರೀರಂಗಪಟ್ಟಣ - ಬೀದರ್ ರಸ್ತೆ.
2) ಹೊಸಪೇಟೆ - ಮಂಗಳೂರು ರಸ್ತೆ.
3) ಹೆಚ್. ಕೆ. ಕೆ. ಎಸ್. ಟಿ. ರಸ್ತೆ.
4) ಕಡಪದ - ಶಿಲಾ - ಮೊಳಕಾಲ್ಮೂರು ರಸ್ತೆ.
5) ಎಂ. ಎಂ. ಟಿ. ಬಿ. ಹೆಚ್. ರಸ್ತೆ.

(2) ಜಿಲ್ಲಾ ಮುಖ್ಯ ರಸ್ತೆಗಳು :

ಅ) ಬಳ್ಳಾರಿ ತಾಲ್ಲೂಕು :

1) ಬಳ್ಳಾರಿ - ಕಲ್ಯಾಣದುರ್ಗ ರಸ್ತೆ.

2) ಹಗರಿ ಸೇತುವೆಯಿಂದ ರಾಜ್ಯ ಗಡಿಯವರೆಗಿನ ರಸ್ತೆ.

3) ಕುಡತಿ - ಕುರುಗೋಡು ರಸ್ತೆ.

4) ಬಳ್ಳಾರಿ - ಮೋಕ - ಆಲೂರು ರಸ್ತೆ.

5) ಬಳ್ಳಾರಿ - ಬಸವನಹಟ್ಟಿ ರಸ್ತೆ.

6) ಬಳ್ಳಾರಿ - ರೂಪನಗುಡಿ ರಸ್ತೆ.

7) ರಾಷ್ಟ್ರೀಯ ಹೆದ್ದಾರಿ - 65 ರಿಂದ ಆಂಧ್ರ ಗಡಿಯ ಗುತ್ತಿಯವರೆಗೆ.

8) ಬಳ್ಳಾರಿ - ತಾಳೂರು ರಸ್ತೆ.

9) ಬಳ್ಳಾರಿ - ಕೂಡತಿನಿ ರಸ್ತೆ (ಮಾರ್ಗ ಹರಗಿನ ಕೋಣೆ)

10) ಹಲಕುರಿ - ಬುರ್ರಕುಂಟ ರಸ್ತೆ.

11) ಬಳ್ಳಾರಿ - ಬೊಬ್ಬಕುಂಟ ರಸ್ತೆ.

12) ಮೋಕ - ಬಸರಕೋಡು ರಸ್ತೆ.

13) ಕುರುಗೋಡು - ಮುಸ್ಟಗಟ್ಟ ರಸ್ತೆ.

14) ದೂಪನಹುಡಿ - ಬೆಳ್ಳಗುರ್ಕಿ ರಸ್ತೆ.

15) ಮೋಕದಿಂದ ಮದ್ರಾಸ್ - ಬಾಂಬೆ ಕೂಡು ರಸ್ತೆ.

16) ಗುಗ್ಗರಹಟ್ಟಿಯಿಂದ ಬೆಳಗಲ್ ತಾಂ ರಸ್ತೆ.

17) ಟ್ಯಾಂಕ್ ಬಂದ್ ರಸ್ತೆ.

18) ಕುರುಗೋಡು - ಶಿರಿಗೇರಿ - ಮಾಲಮಡಿಕೆ ರಸ್ತೆ.

19) ಕಂಪ್ಲಿ - ಕುರುಗೋಡು ಕೊಳೂರು ರಸ್ತೆ.

(ಆ) ಶಿರಗುಪ್ಪ ತಾಲ್ಲೂಕು :

1) ಕುರುಗೋಡು - ಶಿರಿಗೇರಿ - ಮಾಲಮಡಿಕೆ ರಸ್ತೆ.

2) ಆದೋನಿ - ಶಿರಗುಪ್ಪ ರಸ್ತೆ.

3) ಶಿರಗುಪ್ಪ - ದೇಶನೂರು - ವಿರುಪಾಪುರ ರಸ್ತೆ.

4) ಶಿರಗುಪ್ಪ - ಹಚ್ಚೊಳ್ಳಿ - ಕಿತ್ತು ಮುರವಾದ ರಸ್ತೆ.

5) ನಾಡಂಗ - ವತ್ತು ಮುರವಾಣಿ ರಸ್ತೆ.

6) ಕುಡಡ್ರಾಳದಿಂದ - ಕೆ.ಬೆಳಗಲಿ ಮತ್ತು ಆಂಧ್ರಾ ಪ್ರದೇಶ ಗಡಿಯವರೆಗೆ ರಸ್ತೆ.

7) ಶಿರಗುಪ್ಪಾ - ಕೆಂಚನಗುಡ್ಡ ಕ್ರಾಸ್‌ನಿಂದ ಮಣ್ಣೂರು - ಸೂಗೂರುವರೆಗೆ ರಸ್ತೆ.

(ಇ) ಹೊಸಪೇಟೆ ತಾಲ್ಲೂಕು :

1) ಹೊಸಪೇಟೆ - ಕಂಪ್ಲಿ ರಸ್ತೆ.

2) ಹೊಸಪೇಟೆ - ಅಮರಾವತಿ ರಸ್ತೆ.

3) ಮರಿಯಮ್ಮನಹಳ್ಳಿ - ಕೂಡ್ಲಿಗಿ ರಸ್ತೆ.

4) ದೇವಲಾಪುರ - ಕಮಲಾಪುರ ರಸ್ತೆ.

5) ಕಮಲಾಪುರ - ಹಂಪಿ ರಸ್ತೆ.

6) ರಾಮಾ ಟಾಕೀಸಿದಿಂದ - ಚಿತ್ರವಾದಿ ರಸ್ತೆ.

7) ದರೋಟಿ - ಸೆಲ್ಲೂಡಿ ರಸ್ತೆ.

8) ಮೆಟ್ರಿ - ಶ್ರೀರಾಮರಂಗಪುರ ರಸ್ತೆ.

9) ಕಂಪ್ಲಿ - ಬೆಳಗೋಡು ರಸ್ತೆ.

10) ಪಾಪಿನಾಯಕನಹಳ್ಳಿ - ಕಮಲಾಪುರ ರಸ್ತೆ.

11) ಸಂದೂರು - ಹೊಸಪೇಟೆ ರಸ್ತೆ.

(ಈ) ಸಂದೂರು ತಾಲ್ಲೂಕು :

1) ಸಂಡೂರು - ಹೊಸಪೇಟೆ ರಸ್ತೆ.

2) ತೋರಣಗಲ್ಲು - ರೈಲ್ವೆ ಫೀದರ್ ರಸ್ತೆ.

3) ಬನ್ನಿಹಟ್ಟಿ - ರಾಜಾಪುರ - ಮೆಟ್ರಿಕಿ ರಸ್ತೆ.

4) ಸಂಡೂರು - ಕುಮಾರಸ್ವಾಮಿ ದೇವಸ್ಥಾನ ರಸ್ತೆ.

5) ಯಶವಂತನಗರ - ಮೋತಲಕುಂಡ ರಸ್ತೆ.

6) ಯಶವಂತನಗರ - ಮರಿಯಮ್ಮನಹಳ್ಳಿ ರಸ್ತೆ.

7) ಚೊರನೂರು - ರಾಮದುರ್ಗ ರಸ್ತೆ.

(ಉ) ಕೂಡ್ಲಿಗಿ ತಾಲ್ಲೂಕು :

1) ಇಟ್ಟಿಗಿ - ಉಜ್ಜನಿ ರಸ್ತೆ.

2) ಕೂಡ್ಲಿಗಿ - ಉಜ್ಜನಿ ರಸ್ತೆ.

3) ಗುಡೇಕೋಟೆ - ಅಪ್ಪಾನಹಳ್ಳಿ ರಸ್ತೆ.

4) ಕೊಟ್ಟೂರು - ಹಗರಿಬೊಮ್ಮನಹಳ್ಳಿ ರಸ್ತೆ.

5) ರಾಮದುರ್ಗ - ಚಿಕ್ಕಜೋಗಿಹಳ್ಳಿ ರಸ್ತೆ.

6) ಬೆಳ್ಳಗಟ್ಟದಿಂದ - ಚಿಕ್ಕ ಕುಂಬಳಕುಂಟೆ ಮತ್ತು ಜಗಳೂರು ತಾಲ್ಲೂಕು ಸರಹದ್ದಿನವರೆಗೆ ರಸ್ತೆ.

7) ಕಡಪದ ಗಜಾಪುರ - ಗೊಲ್ಲರಹಳ್ಳಿ ರಸ್ತೆಯಿಂದ ಜಿಲ್ಲಾ ಮುಖ್ಯ ರಸ್ತೆವರೆಗೆ,

8) ಕೊಟ್ಟೂರು - ಬಣವೀಕಲ್ - ಮಾನಕೆರೆ ರಸ್ತೆ.

9) ಕೊಡ್ಲಿಗಿ ಬೈಪಾಸ್ ರಸ್ತೆ.

10) ಹೊಸಹಳ್ಳಿ - ಕನಾಮದುಗು ರಸ್ತೆ.

(ಊ) ಹಡಗಲಿ ತಾಲ್ಲೂಕು :

1) ಹೊಳಗುಂಡಿ - ಹಡಿಗೇರ - ಮೈಲಾರ ರಸ್ತೆ.

2) ಇಟ್ಟಗಿ -ಸೋವೇನಹಳ್ಳಿ ರಸ್ತೆ.

3) ಹಂಪಸಾಗರ - ಹಡಗಲಿ ರಸ್ತೆ.

4) ಹಡಗಲಿ - ಉತ್ತಂಗಿ ರಸ್ತೆ.

5) ಹಡಗಲಿ - ಮುಂಡರಗಿ ರಸ್ತೆ.

6) ಇಟ್ಟಗಿ - ಮೈಡೂರು ರಸ್ತೆ.

7) ಮಾಗಳ -ಹಿರೇಹಡಗಲಿ - ಬೆಟ್ಟದಮಲ್ಲಪ್ಪ ದೇವಸ್ಥಾನ ರಸ್ತೆ.

8) ಸೋಗಿ - ಕಣವಿಹಳ್ಳಿ ರಸ್ತೆ.

(ಋ) ಹಗರಿ ಬೊಮ್ಮನಹಳ್ಳಿ ತಾಲ್ಲೂಕು:

1) ಕೊಟ್ಟೂರು - ಹಗರಿಬೊಮ್ಮನಹಳ್ಳಿ ರಸ್ತೆ.

2) ಹಗರಿಬೊಮ್ಮನಹಳ್ಳಿ - ಪಂಪಸಾಗರ ರಸ್ತೆ.

3) ತಂಬ್ರಳ್ಳಿ - ಕೊಂಡೇನಹಳ್ಳಿ - ಹೊಳಗುಂದಿ ರಸ್ತೆ.

4) ಬ್ಯಾಸಿದಗೇರಿ - ತಂಬ್ರಹಳ್ಳಿ ರಸ್ತೆ.

5) ಹಗರಿಬೊಮ್ಮನಹಳ್ಳಿ - ಕೂಡ್ಲಿಗಿ ರಸ್ತೆ.

ಮಡಿಕೇರಿ ವೀರರಾಜೇಂದ್ರ ಗದ್ದಿಗೆಗೆ ಇರುವ ಜಾಗದ ವಿಸ್ತೀರ್ಣ

542 (916) ಶ್ರೀ ಎಂ.ಪಿ.ಅಪ್ಪಚ್ಚು ರಂಜನ್ (ಸೋಮವಾರ ಪೇಟೆ) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಡಿಕೇರಿಯ ವೀರರಾಜೇಂದ್ರವರ ಗದ್ದಿಗೆಗೆ ಇರುವ ವಿಸ್ತೀರ್ಣ ಎಷ್ಟು ?

ಆ) ಆ ಜಾಗವನ್ನು ಅಕ್ರಮವಾಗಿ ನಿವೇಶಕ್ಕಾಗಿ ಹಂಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಈ ಜಾಗವನ್ನು ಅಕ್ರಮವಾಗಿ ಆಕ್ರಮಿಸಿಕೊಂಡಿರುವವರ ಒಟ್ಟು ಸಂಖ್ಯೆ ಎಷ್ಟು ?